# ಶಸ್ತ್ರ ಶಾಸ್ತ್ರ

ಶಸ್ತ್ರ ಎಂಬ ಮಾತಿಗೆ ಆಯುಧ ಎಂದು ಅರ್ಥವಷ್ಟೆ. ಇದು ಹಿಂದಿನ ಕಾಲದಲ್ಲಿ ಸಮಾಜದ ಸಂರಕ್ಷಣೆಯ ಸಾಧನವಾಗಿತ್ತು. ಕತ್ತಿ, ತೋಮರ, ಗದೆ, ಭಿಂಡಿವಾಳ, ಮುಸಲ, ಕೊಂತ ಮುಂತಾದುವೆಲ್ಲಾ ಶಸ್ತ್ರಗಳೇ. ಇವು ರಕ್ಷಣೆಯ ಆಯುಧಗಳೂ ಹೌದು; ನಾಡಿನ ಸಂರಕ್ಷಣೆಯ ಆಯುಧಗಳೂ ಹೌದು! ದೇಶದ ಚರಿತ್ರೆಯಲ್ಲಿ ಶಸ್ತ್ರಕ್ಕೆ ಪ್ರಾಧಾನ್ಯವುಂಟು. ಇದು ವೀರತ್ವದ ಸಂಕೇತ. ನಮ್ಮ ನಾಡಿನ ಸಹಸ್ರಾರು ವೀರಗಲ್ಲುಗಳು ಶಸ್ತ್ರದ ನೆಲೆಬೆಲೆಯನ್ನು ಪ್ರತ್ಯಕ್ಷವಾಗಿ ತಿಳಿಸುತ್ತವೆ. ಗ್ರಾಮ, ನಗರ, ಖೇಡ, ಖರ್ವಡ, ದ್ರೋಣಾಮುಖಗಳಲ್ಲಿ ಜನರೂ, ಮಹಾಜನರೂ, ಅರಸರೂ ಇರುತ್ತಿದ್ದರು. ಅವರು ಸ್ವರಕ್ಷಣೆಗಾಗಿ ಶಸ್ತ್ರಗಳನ್ನು ಸದಾ ಧರಿಸಿಯೇ ಇರುತ್ತಿದ್ದರು. ನಾಡಿನ ಪ್ರತಿಯೊಬ್ಬ ವೀರರೂ ಶಸ್ತ್ರಗಳಿಂದ ಸದಾ ಸನ್ನದ್ಧರಾಗಿರುತ್ತಿದ್ದರು. ಶತ್ರುಗಳು ಯಾವಾಗ ಆಕ್ರಮಣ ಮಾಡುತ್ತಾರೋ ಯಾರಿಗೂ ತಿಳಿಯುತ್ತಿರಲಿಲ್ಲ. ಇನ್ನು ಯುದ್ಧಭೂಮಿ ಶಸ್ತ್ರಾಗಾರಗಳ ಸಂದಣಿಯೇ ಹೌದು. ನಗರ ಸಂರಕ್ಷಣೆಯ ಕೇಂದ್ರಪ್ರತಿಮೆ ಶಸ್ತ್ರವೇ ಆಗಿತ್ತು.

ಕನ್ನಡ, ಸಂಸ್ಕೃತ ಕಾವ್ಯಗಳಲ್ಲಿ ಯುದ್ಧದ ಪ್ರಸಂಗಗಳು ಬರುತ್ತವೆಯಷ್ಟೆ. ಭೀಮ ದುರ್ಯೋಧನರ ಗದಾಯುದ್ಧವು ಶಸ್ತ್ರಪ್ರಾಬಲ್ಯಕ್ಕೆ ಎತ್ತಿದ ಕನ್ನಡಿ. ಪಂಪ, ರನ್ನರಲ್ಲಿ ಶಸ್ತ್ರಗಳ ಠೇಂಕಾರ ನಮಗೆ ಕೇಳಬರುತ್ತದೆ. ನಮ್ಮ ಕಲಾವಿದರು ಭೀಮದುರ್ಯೋಧನರ ಚಿತ್ರವನ್ನು ಬಿಡಿಸಿ ಗದೆಯನ್ನು ಹಿಡಿದಿರುವ ರೀತಿಯನ್ನು ನೋಡಿ ನಮ್ಮ ಮೈ ಪುಳಕವನ್ನು ತರಿಸುತ್ತದೆ. ಹಿರಿಯ ಕಲಾವಿದ ಎಂ.ಟಿ.ವಿ. ಆಚಾರ್ಯ ಬಿಡಿಸಿರುವ ಚಿತ್ರವನ್ನೊ ಚಂದ್ರನಾಥ್ ಆಚಾರ್ಯ ಬಿಡಿಸಿರುವ ಚಿತ್ರವನ್ನೊ, ಒಮ್ಮೆ ನೆನಪಿಸಿಕೊಳ್ಳಬಹುದು. ಕಾವ್ಯದಲ್ಲಿ ಮಾತುಗಳಿವೆ. ಅಲ್ಲಿ ಶಸ್ತ್ರದ ಭಂಗಿ ಭಣಿತಗಳು ಸಹೃದಯನೊಡನೆ ಮಾತಾಡುತ್ತವೆ. ಹಿಂದಿನ ಕಾಲದಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ಆಯುಧಗಳನ್ನು ಗೋಡೆಗೆ ತಗುಲಿ ಹಾಕುತ್ತಿದ್ದರು. ಇದು ಭೌತಿಕ ಸಾಧನ. ಆದರೆ, ಪರಿಣಾಮಕಾರಿಯಾದ ಸಾಧನವೇನೊ ಹೌದು.

ಶಸ್ತ್ರದ ನೆನಪಾದಾಗ ಶಾಸ್ತ್ರವು ನೆನಪಿಗೆ ಬರುತ್ತದೆ. ಶಸ್ತ್ರವು ಆಯುಧ ವಿಶೇಷ. ಆದರೆ, ಶಾಸ್ತ್ರವು ಬುದ್ಧಿಯ ವಿಶೇಷ. ಶಾಸ್ತ್ರ ಎಂಬುದು ಶಸ್ತ್ರದಷ್ಟೇ ಪ್ರಬಲವಾಗಿರುತ್ತಿತ್ತು. ಶಾಸ್ತ್ರವು ಬುದ್ಧಿಯ ಕೌಶಲ್ಯವನ್ನೂ ಆತನ ಅಪೂರ್ವ ಬೌದ್ಧಿಕ ಪಾಂಡಿತ್ಯವನ್ನೂ ಬೇಡುತ್ತಿತ್ತು. ಭಾರತೀಯ ಸಂಸ್ಕೃತಿಯಲ್ಲಿ ಶಸ್ತ್ರಕ್ಕಿದ್ದ ಪ್ರಾಧಾನ್ಯತೆಯೇ ಶಾಸ್ತ್ರಕ್ಕೂ ಇರುತ್ತಿತ್ತು. ಶುದ್ಧವಾದ ಶಾಸ್ತ್ರಪ್ರಜ್ಞೆ ಇದ್ದ ವಿದ್ವಾಂಸರನ್ನು ಜನ ಎತ್ತಿ ಕೊಂಡಾಡುತ್ತಿದ್ದರು. ಶ್ರೀಹರ್ಷ ಭಾರತದ ಚಕ್ರವರ್ತಿಗಳಲ್ಲಿ ಒಬ್ಬ. ಅವನು ಶಾಸ್ತ್ರಪರಿಣತನೂ ಹೌದು; ಶಸ್ತ್ರಪರಿಣತನೂ ಹೌದು! ಅವನು ಉತ್ತರಭಾರತದ ಚಕ್ರವರ್ತಿ. ಇಮ್ಮಡಿ ಪುಲಿಕೇಶಿ ಶ್ರೀಹರ್ಷನನ್ನು ಉತ್ತರಕ್ಕೆ ಅಟ್ಟಿಸಿದ ವಿವರಗಳು ಬರುತ್ತವೆ. ಅವನು ನಾಟಕಗಳನ್ನೂ ಶಾಸ್ತ್ರಗ್ರಂಥವೊಂದನ್ನೂ ಬರೆದಿದ್ದಾನೆ. ಕನ್ನಡದ ಪಂಪ ಸವ್ಯಸಾಚಿಯೆಂದೇ ಹೆಸರು ಪಡೆದವನು. ಅವನು ಕವಿಯೂ ಹೌದು; ಕಲಿಯೂ ಹೌದು!

ಶಾಸ್ತ್ರಪಾಂಡಿತ್ಯ ಎಂಬ ಮಾತು ಬಳಕೆಯಲ್ಲಿದೆ. ಶಾಸ್ತ್ರವು ಎದುರಿಗಿರುವ ಪಂಡಿತನನ್ನು ಪರಿಶೀಲಿಸುತ್ತದೆ. ಹಿಂದಿನ ಕಾಲದಲ್ಲಿ ವಾಕ್ಯಾರ್ಥಗೋಷ್ಠಿಗಳು ನಡೆಯುತ್ತಿದ್ದವು. ಶಾಸ್ತ್ರ ಪರಿಣತಿ ಪಡೆದವನು ಪ್ರಶ್ನೆಗಳ ಕೋಟೆಯನ್ನು ಎತ್ತಿ ಎದುರಿಗಿದ್ದ ವಿದ್ವಾಂಸನ ಮುಖಭಂಗಗೊಳಿಸುತ್ತಿದ್ದುದುಂಟು. ಇಂಥವು ಒಂದಲ್ಲ ಹತ್ತು. ಬಂಗಾಳವು ನ್ಯಾಯಶಾಸ್ತ್ರಕ್ಕೆ ಮುಕುಟಪ್ರಾಯವಾಗಿತ್ತು. ಅಲ್ಲಿದ್ದ ನವದ್ವೀಪದ ಪಂಡಿತರು ದೇಶದ ನಾನಾ ಕಡೆ ಹೋಗಿ ತಮ್ಮ ಶಾಸ್ತ್ರಪಾಂಡಿತ್ಯವನ್ನು ಮೆರೆಯುತ್ತಿದ್ದರು. ತರ್ಕದ ಕೋಟೆಗಳನ್ನು ಏರಿಸಿ ವಿದ್ವಾಂಸರನ್ನು ಒಂದುರೀತಿ ತಮ್ಮ ಗುಲಾಮರನ್ನಾಗಿಸಿಕೊಳ್ಳುತ್ತಿದ್ದರು. ಇದು ಆಕಾಲದ ರೀತಿರಿವಾಜು. ಇದು ಹಲವೊಮ್ಮೆ ವಿಪರೀತಕ್ಕೆ ಹೋಗುತ್ತಿದ್ದುದುಂಟು. ಆದರೆ, ಉದಾರ ಹಾಗೂ ವಿಶಾಲ ಸ್ವಭಾವದ ವಿದ್ವಾಂಸರು ನಯದಿಂದ ಅದನ್ನು ಹೋಗಲಾಡಿಸುತ್ತಿದ್ದರು. ಶಾಸ್ತ್ರವು ಶಸ್ತ್ರವಾಗದೆ ಅದು ವಿವೇಕವನ್ನು ಅರಳಿಸುವಂತೆ ಇರಬೇಕೆಂದು ತಿಳಿದವರು ಎಚ್ಚರಿಸುತ್ತಿದ್ದುದುಂಟು. ‘ಶಠಂ ಪ್ರತಿ ಶಾಠ್ಯಂ’ ಎಂಬ ಮಾತೇನೊ ಉಂಟು. ಕೆಲವೊಮ್ಮೆ ಈ ಗರ್ವದ ದಾರಿಯು ಅವನ ವಿವೇಕವನ್ನು ಕುರುಡು ಮಾಡುತ್ತಿತ್ತು.

ಶಾಸ್ತ್ರವನ್ನು ಕುರಿತು ಹಲವು ವಿಚಾರಗಳಿವೆ. ಕುವೆಂಪು ‘ಯಾವ ಶಾಸ್ತ್ರ ಏನು ಹೇಳಿದರೇನು? ಹೃದಯಕೂ ಮಿಗಿಲಾದ ಶಾಸ್ತ್ರವುಂಟೆ’ ಎಂದು ಒಂದು ಕಡೆ ಹೇಳಿದ್ದಾರೆ! ಬುದ್ಧಿಯ ಪಾಂಡಿತ್ಯವು ಶಾಸ್ತ್ರದ ನಿಲುಮೆಯನ್ನು ಪ್ರತಿನಿಧಿಸುತ್ತದೆ. ಆದರೆ, ಹೃದಯದ ವಿವೇಕವು ಶಾಸ್ತ್ರದ ಗರ್ವವನ್ನು ತಗ್ಗಿಸುತ್ತದೆ. ಶಾಸ್ತ್ರಕ್ಕೂ ಶಸ್ತ್ರಕ್ಕೂ ಆದಿವರ್ಣದಲ್ಲಿ ದೀರ್ಘ ಮತ್ತು ಹ್ರಸ್ವಗಳ ವ್ಯತ್ಯಾಸ ಮಾತ್ರ ಉಂಟು. ಆದರೆ, ಶಾಸ್ತ್ರವು ತರ್ಕಮುಖವಾಗದೆ; ಅದು ವಿವೇಕದ ಸೋಪಾನವಾಗಬೇಕು.

ಕಾಶ್ಮೀರದ ಅಭಿನವಗುಪ್ತಪಾದರು ಶಾಸ್ತ್ರಕ್ಕೆ ಅಧ್ಯಾತ್ಮದ ಪರಿವೇಶವನ್ನು ತೊಡಿಸಿದರು. ಯಾವಾಗ ಶಾಸ್ತ್ರಕ್ಕೆ ಅಧ್ಯಾತ್ಮದ ಪ್ರಭಾವಳಿ ಬಂತೊ ಆಗ ‘ಶಾಸ್ತ್ರ ಮರ್ಯಾದೆ’ ಎಂದು ಹೆಸರು ಬಂದಿತು. ಶಸ್ತ್ರವು ರಕ್ತವನ್ನು ಬೇಡಿದರೆ, ಶಾಸ್ತ್ರವು ವಿವೇಕವನ್ನು ಬೇಡುತ್ತದೆ. ಆದರೆ, ಎಲ್ಲಾ ಕಾಲದಲ್ಲೂ ಇದು ಹೀಗೇ ಇರಲಿಲ್ಲ. ಇದೀಗ ಶಾಸ್ತ್ರದ ಜಾಗದಲ್ಲಿ ‘ವಿಜ್ಞಾನ’ ಬಂದು ಕುಳಿತಿದೆ. ಶಸ್ತ್ರದ ಜಾಗದಲ್ಲಿ ಆಧುನಿಕ ಯುದ್ಧಸಾಮಗ್ರಿಗಳು ಬಂದು ಕುಳಿತಿವೆ. ಆದರೆ, ನಾವು ಇವೆರಡನ್ನು ಬಳಸುವಾಗ ಪೂರ್ವಾಪರ ವಿವೇಕದ ಮೊರೆಯನ್ನು ಹೊಗಬೇಕಾಗಿದೆ. ಹೀಗಾಗಿ, ಶಾಸ್ತ್ರ ಮತ್ತು ಶಸ್ತ್ರಗಳೆರಡು ವಿವೇಕದ ಅಡಿಯಲ್ಲಿ ಬದುಕಬೇಕಾಗಿದೆ. ಬುದ್ಧಿಯು ಉದ್ಧಟತನವನ್ನು ಎತ್ತಿ ತೋರಿಸಿದರೆ, ಹೃದಯವು ಸಮಾಧಾನದ ಗೆರೆಯನ್ನು ತೋರಿಸುತ್ತದೆ. ವ್ಯಕ್ತಿ, ಕುಟುಂಬ, ಸಮುದಾಯ, ಸಮಾಜ, ದೇಶಗಳಲ್ಲಿ ‘ವಿವೇಕ ಸೋಪಾನ’ ಪರಂಪರೆಯನ್ನು ಕಾಪಿಟ್ಟುಕೊಳ್ಳುವುದು ಈ ದೃಷ್ಟಿಯಿಂದ ಎಂದಿಗೂ ಅವಶ್ಯವಲ್ಲವೆ?

■ ಪುರಂಜೀವಿ

## ಮಾತೇ ಮುತ್ತು

- ಶಕ್ತಿಯನ್ನು ಮೀರಿದ ಕೆಲಸದ ಆರಂಭವು ಸಂಪತ್ತಿನ ನಾಶಕ್ಕೆ ಕಾರಣವಾಗುತ್ತದೆ.
  —ಶಿಶುಪಾಲ ವಧು
- ಗುಣವನ್ನು ತಿಳಿದರೆ ಸಾಲದು. ಅದನ್ನು ಉಳ್ಳವನಾಗಲು ಪ್ರಯತ್ನಿಸಬೇಕು.
  —ಅರಿಸ್ಟಾಟಲ್
- ನಾನು ಮಾಡಿದ್ದನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುವುದೇ ಜೀವನದಲ್ಲಿ ಎದುರಾಗುವ ಅತ್ಯಂತ ದೊಡ್ಡ ದುರಂತ.
  —ಗಾಲ್ಸ್‌ವರ್ದಿ
- ದಡ್ಡನಾದರೂ ನಾಲಿಗೆ ಬಿಗಿಹಿಡಿದರೆ ಅವನೂ ವಿವೇಕಿ ಅನ್ನಿಸಿಕೊಳ್ಳುತ್ತಾನೆ.
  —ಸೆನೆಕ
- ನಿಲ್ಲುವುದೇ ಸಾವು, ಚಲಿಸುವುದೇ ಬಾಳು.
  —ಕುವೆಂಪು
- ಉತ್ಸಾಹದಿಂದ ಕೆಲಸ ಮಾಡುವವನು ತನ್ನ ಗುರಿ ಮುಟ್ಟುವಲ್ಲಿ ಯಶಸ್ವಿಯಾಗುತ್ತಾನೆ.
  —ವಾಲ್ಮೀಕಿ
- ದ್ವೇಷವನ್ನು ಶ್ರೀಮಂತಿಕೆಯನ್ನು ಮುಚ್ಚಿಡಬಹುದು. ಆದರೆ ಪ್ರೀತಿಯನ್ನು ಬಡತನವನ್ನು ಮುಚ್ಚಿಡಲು ಆಗುವುದಿಲ್ಲ.
  —ಶ್ರೀರಂಗ
- ಸಂವಿಧಾನವು ದೇಶದ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಶಕ್ತಿ ಹೊಂದಿದೆ.
  —ಬಿ.ಆರ್. ಅಂಬೇಡ್ಕರ್
- ನಾವು ಅಪೇಕ್ಷಿಸುವಂತೆ ಜೀವಿಸುವುದಿಲ್ಲ. ಸಾಧ್ಯವಿರುವಂತೆ ಜೀವಿಸುತ್ತೇವೆ.
  —ಮಿನಾಂಡರ್